ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	641
ಸದಸ್ಯರ ಹೆಸರು	:	ಶ್ರೀ ನಸೀರ್ ಅಹಮದ್ (ವಿಧಾನ ಸಭೆ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	24.09.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿರವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೃತ್ತಿ ಹೊಂದಿದ ಅಧಿಕಾರಿ/ನೌಕರರನ್ನು ಮುಂದುವರೆಸಿರುವುದು ನಿಜವೇ; ಹಾಗಿದ್ದಲ್ಲಿ ಯಾವ್ಯಾವ ದಿನಾಂಕದಂದು ನಿವೃತ್ತಿ ಹೊಂದಿದವರನ್ನು ಯಾವ ದಿನಾಂಕದಿಂದ ಮುಂದುವರೆಸಲಾಗಿದೆ; (ಮಾಹಿತಿ ನೀಡುವುದು)	ಹೌದು, ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.
(ಆ)	ನಿವೃತ್ತರನ್ನು ಮುಂದುವರೆಸಿರುವುದು ಸರ್ಕಾರದ ಆದೇಶದ ವಿರುದ್ದವಾಗಿಲ್ಲವೇ; ನಿವೃತ್ತರಿಂದಾಗುವ ಅಚಾತುರ್ಯ ಅಥವಾ ಬೇಜವಾಬ್ದಾರಿತನಗಳಿಗೆ ಹೇಗೆ ಜವಾಬ್ದಾರಿ ನಿಗದಿಗೊಳಿಸಲು ಸಾಧ್ಯ; (ಮಾಹಿತಿ ನೀಡುವುದು)	ಸರ್ಕಾರ ಸುತ್ತೋಲೆ ಸಂಖ್ಯೆ:ಸಿಆಸುಇ 588 ಸೇನೆನಿ 2015 ದಿನಾಂಕ:02-03-2016 ರನ್ವಯ ಮತ್ತು ಪ್ರಾಧಿಕಾರದ ಸಭೆಯ ದಿನಾಂಕ:30-05-2015 ರಲ್ಲಿ ತೀರ್ಮಾನಿಸಿರುವಂತೆ, ಪ್ರಾಧಿಕಾರದ ಕೆಲಸ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ, ಪ್ರಾಧಿಕಾರದ ಕೆಲವು ಅತೀ ಮುಖ್ಯ ವಿಭಾಗಗಳಲ್ಲಿ ಅನುಭವ ಇರುವ ಮತ್ತು ಯಾವುದೇ ನಿರ್ದಿಷ್ಟವಾದ ಆರೋಪಗಳಾಗಲಿ, ಇಲಾಖಾ ವಿಚಾರಣೆ ಬಾಕಿ ಇಲ್ಲದೆ ಇರುವಂತಹ ನಿವೃತ್ತ ನೌಕರರನ್ನು ಮಾತ್ರ ಪ್ರಾಧಿಕಾರದ ಆರ್ಥಿಕ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು ತಾತ್ಕಾಲಿಕವಾಗಿ ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಪ್ರಾಧಿಕಾರದಲ್ಲಿ ಪ್ರತಿ ತಿಂಗಳು ಸಾಕಷ್ಟು ಸಂಖ್ಯೆಯಲ್ಲಿ ನೌಕರರು ನಿವೃತ್ತಿ ಹೊಂದುತ್ತಿರುವುದರಿಂದ ಸಾಕಷ್ಟು 'ಸಿ' ಮತ್ತು 'ಡಿ' ಹುದ್ದೆಗಳು ಖಾಲಿ ಇರುತ್ತದೆ. ಯಾವುದೇ ನೇಮಕಾತಿಯನ್ನು ಮಾಡಿರುವುದಿಲ್ಲವಾದ್ದರಿಂದ ನಿರ್ದಿಷ್ಟವಾದ ಆರೋಪಗಳಾಗಲಿ, ಇಲಾಖಾ ವಿಚಾರಣೆ ಅಥವಾ ಯಾವುದೇ ವಿಚಾರಣೆಗಳು ಬಾಕಿ ಇಲ್ಲದೆ ಇರುವಂತಹ ನಿವೃತ್ತ ನೌಕರರನ್ನು ಮಾತ್ರ ಗುತ್ತಿಗೆ ಆಧಾರದ ಮೇಲೆ ನಿಯಮಿತ ಕೆಲಸಗಳಿಗೆ ಮಾತ್ರ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ನಿವೃತ್ತ ನೌಕರರುಗಳು ಮೇಲಧಿಕಾರಿಗಳಿಗೆ ಸಹಾಯಕರಾಗಿ ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ.
(ಇ)	ಪ್ರಾಧಿಕಾರದಲ್ಲಿ ಮುಂದುವರೆದಿರುವ ನಿವೃತ್ತ ನೌಕರರನ್ನು ಕೈಬಿಡುವ ಅಥವಾ ತೆಗೆದುಹಾಕುವ ಬಗ್ಗೆ ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ನೀಡಿರುವುದು ನಿಜವೇ; (ಭರವಸೆ ದಿನಾಂಕವನ್ನು ತಿಳಿಸುವುದು) ಇದ್ದಲ್ಲಿ ಈವರೆಗೂ ಈ ದಿಸೆಯಲ್ಲಿ ಪ್ರಾಧಿಕಾರ ಕೈಗೊಂಡ ಕ್ರಮಗಳೇನು;	ಪ್ರಾಧಿಕಾರದಲ್ಲಿ ಸಂಚಿತ ವೇತನದ ಆಧಾರದ ಮೇಲೆ ಮುಂದುವರೆದಿರುವ ನಿವೃತ್ತ ನೌಕರರನ್ನು ಕೈಬಿಡುವ ಅಥವಾ ತೆಗೆದುಹಾಕುವ ಬಗ್ಗೆ ಈ ಹಿಂದಿನ ಅಧಿವೇಶನದಲ್ಲಿ ದಿನಾಂಕ:19.03.2020ರಂದು ಪ್ರಾಧಿಕಾರದಿಂದ ನಿವೃತ್ತಿ ಹೊಂದಿದಂತಹ ಹತ್ತು ಜನ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಅವರಿಗೆ ಯಾವುದೇ ಜವಾಬ್ದಾರಿ

		ಇರುವುದಿಲ್ಲವೆಂದು ಮೇಲಧಿಕಾರಿಗಳಿಗೆ ಸಹಾಯಕರಾಗಿ ಮಾತ್ರ ಕರ್ತವ್ಯನಿರ್ವಹಿಸುತ್ತಿದ್ದು ಈ ಹಿಂದೆ ಮಾಡಿಕೊಂಡಿರುವ ನೇಮಕಾತಿಯನ್ನು ಬೇಕಾದಲ್ಲಿ ಕೈಬಿಡೋಣವೆಂದು ಉತ್ತರಿಸುವ ಸಮಯದಲ್ಲಿ ತಿಳಿಸಲಾಗಿತ್ತು. ಇಂತಹ ಅಧಿಕಾರಿ/ನೌಕರರಲ್ಲಿ ಇಬ್ಬರು ನೌಕರರು ಕಛೇರಿ ಕೆಲಸಕ್ಕೆ ಹಾಜರಾಗುತ್ತಿಲ್ಲ. 06 ಜನ ಅಧಿಕಾರಿ/ನೌಕರರ ಸೇವೆಯನ್ನು ಸಮಾಪ್ತಿಗೊಳಿಸಲಾಗಿದೆ. ಪ್ರಸ್ತುತ, ಪ್ರಾಧಿಕಾರದಲ್ಲಿ ತೀರಾ ಅಗತ್ಯತೆಯಿರುವ 11 ನಿವೃತ್ತ ನೌಕರುಗಳನ್ನು ಸಂಚಿತ ವೇತನದ ಆಧಾರದ ಮೇಲೆ ಮಾತ್ರ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ. (ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ)
(ಈ)	ಇಂತಹವುಗಳನ್ನು ತಪ್ಪಿಸಿ ಅನೇಕ ವರ್ಷಗಳಿಂದ ಅನುಕಂಪದ ಆಧಾರದ ಮೇಲೆ ಉದ್ಯೋಗ ಬಯಸಿ ಅರ್ಜಿ ಸಲ್ಲಿಸಿದವರನ್ನು ಅಥವಾ ಪರಿಗಣಿಸಲು ಅಥವಾ ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ಇರುವ ತೊಂದರೆಗಳೇನು; ಈ ಬಗ್ಗೆ ಕೈಗೊಳ್ಳುವ ಕ್ರಮಗಳೇನು?	ಪ್ರಾಧಿಕಾರದಲ್ಲಿ ಅನೇಕ ವರ್ಷಗಳಿಂದ ಅನುಕಂಪದ ಆಧಾರದ ಮೇಲೆ ಉದ್ಯೋಗ ಬಯಸಿ ಅರ್ಜಿ ಸಲ್ಲಿಸಿದವರುಗಳ ಪೈಕಿ, ಅನುಕಂಪದ ಆಧಾರದ ಮೇಲೆ ನೇಮಕಾತಿ ನಿಯಮಗಳು 1996 ರನ್ವಯ ನಿಯಮಾನುಸಾರ ಅರ್ಹರಿರುವ ಎಲ್ಲಾ ಅರ್ಜಿದಾರರುಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿರುತ್ತದೆ. ಪ್ರಸ್ತುತ ಯಾವುದೇ ಅರ್ಜಿ ಬಾಕಿ ಇರುವುದಿಲ್ಲ ಹಾಗೂ ಎಲ್ಲಾ ನೌಕರರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

ನಅಇ 24 ಬೆಂಅಸೇ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಪ್ರಾಧಿಕಾರದಲ್ಲಿ ಗುತ್ತಿಗೆ/ಸಂಚಿತ ವೇತನ ಆಧಾರದ ಮೇಲೆ ಕೆಲಸ ಮಾಡುತ್ತಿರುವ ನಿವೃತ್ತ ಅಧಿಕಾರಿ/ನೌಕರರುಗಳ ಪಟ್ಟಿ

ಅನುಬಂಧ-1

ಕ್ರ.ಸಂ.	ಹೆಸರು ಶ್ರೀ/ಶ್ರೀಮತಿ	ಹುದ್ದೆ/ವಿಭಾಗ	ನಿವೃತ್ತಿ ಹೊಂದಿದ ದಿನಾಂಕ	ಗುತ್ತಿಗೆ ಮೇಲೆ ಪ್ರಾಧಿಕಾರದಲ್ಲಿ ಕೆಲಸದ ಮೇಲೆ ಹಾಜರಾದ ದಿನಾಂಕ	ಷರಾ
1	ಬಸವರಾಜಪ್ಪ (ನಿವೃತ್ತ)	ಆರ್ಥಿಕ ವಿಭಾಗ	30-04-2015	04-07-2016	ಸೇವೆಯನ್ನು ಸಮಾಪ್ತಿಗೊಳಿಸಲಾಗಿದೆ.
2	ವಲೇರಿಯನ್ ಫೆರ್ನಾಂಡಿಸ್ (ನಿವೃತ್ತ)	ಆರ್ಥಿಕ ವಿಭಾಗ	31-10-2013	06-11-2013	ಸೇವೆಯನ್ನು ಸಮಾಪ್ತಿಗೊಳಿಸಲಾಗಿದೆ.
3	ಶ್ರೀಪಾದರಾಜು, (ನಿವೃತ್ತ)	ಸ.ಕಾ.ಇ., (ವಾಹನ) ವಿಭಾಗ	31-07-2012	18-08-2012	ಸೇವೆಯನ್ನು ಸಮಾಪ್ತಿಗೊಳಿಸಲಾಗಿದೆ.
4	ಪುಟ್ಟಸ್ವಾಮಿ. (ನಿವೃತ್ತ)	'ಡಿ' ಗ್ರೂಪ್ ಮಾನ್ಯ ಅಧ್ಯಕ್ಷರ ಆಪ್ತ ವಿಭಾಗ	30-04-2019	01-05-2019	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.
5	ಸಂಪತ್ ಕುಮಾರ್ (ನಿವೃತ್ತ)	ಮೇಲ್ವಿಚಾರಕರು ಮಾನ್ಯ ಅಧ್ಯಕ್ಷರ ಆಪ್ತ ವಿಭಾಗ	31-07-2019	01-08-2019	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.
6	ಸುಬ್ಬರಾವ್ (ನಿವೃತ್ತ)	ಮೇಲ್ವಿಚಾರಕರು ಮಾನ್ಯ ಆಯುಕ್ತರ ಆಪ್ತ ವಿಭಾಗ	31-12-2019	02-01-2020	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.
7	ಮಂಜುನಾಥ್.ವಿ (ನಿವೃತ್ತ)	ಮೇಲ್ವಿಚಾರಕರು ಅಭಿಯಂತರ ಸದಸ್ಯರ ವಿಭಾಗ	30-04-2019	01-01-2020	ಸೇವೆಯನ್ನು ಸಮಾಪ್ತಿಗೊಳಿಸಲಾಗಿದೆ.
8	ಸತ್ಯನಾರಾಯಣ ರಾವ್ (ನಿವೃತ್ತ)	ಮೇಲ್ವಿಚಾರಕರು ಅಭಿಯಂತರ ಸದಸ್ಯರ ಆಪ್ತ ವಿಭಾಗ	31-12-2019	01-02-2020	ಕೆಲಸಕ್ಕೆ ಹಾಜರಾಗುತ್ತಿಲ್ಲ.
9	ಪುರದಪ್ಪ (ನಿವೃತ್ತ)	ಅಕೌಂಟ್ ಆಫೀಸರ್ ಆರ್ಥಿಕ ವಿಭಾಗ	31-08-2014	30-04-2020	ಸೇವೆಯನ್ನು ಸಮಾಪ್ತಿಗೊಳಿಸಲಾಗಿದೆ.
10	ಪಾರ್ವತಮ್ಮ (ನಿವೃತ್ತ)	'ಡಿ' ಗ್ರೂಪ್ ಅಭಿಯಂತರ ಸದಸ್ಯರ ವಿಭಾಗ	30-04-2016	04-05-2020	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.
11	ವಾಸುದೇವರಾಜು (ನಿವೃತ್ತ)	'ಡಿ' ಗ್ರೂಪ್ ಅಭಿಯಂತರ ಸದಸ್ಯರ ವಿಭಾಗ	31-03-2020	04-05-2020	ಕೆಲಸಕ್ಕೆ ಹಾಜರಾಗುತ್ತಿಲ್ಲ.
12	ವೀರಶೆಟ್ಟಿ (ನಿವೃತ್ತ)	'ಡಿ' ಗ್ರೂಪ್ ನಗರ ಯೋಜಕ ಸದಸ್ಯರ ವಿಭಾಗ	31-05-2019	24-01-2020	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.

13	ರಂಗಪ್ಪ (ನಿವೃತ್ತ)	'ಡಿ' ಗ್ರೂಪ್ ನಗರ ಯೋಜಕ ಸದಸ್ಯರ ವಿಭಾಗ	31-03-2020	24-04-2020	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.
14	ಶಿವಲಿಂಗೇಗೌಡ (ನಿವೃತ್ತ)	'ಡಿ' ಗ್ರೂಪ್ ಕಾರ್ಯದರ್ಶಿಯವರ ಆಪ್ತ ವಿಭಾಗ	31-05-2020	10-07-2020	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.
15	ಲಿಂಗಯ್ಯ, (ನಿವೃತ್ತ)	'ಡಿ' ಗ್ರೂಪ್ ಕಾರ್ಯದರ್ಶಿಯವರ ಆಪ್ತ ವಿಭಾಗ	31-03-2019	10-07-2020	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.
16	ಕೆ.ಬಿ.ಕೃಷ್ಣಪ್ಪ, (ನಿವೃತ್ತ)	ವಾಹನ ಚಾಲಕರು ಕಾರ್ಯದರ್ಶಿಯವರ ಆಪ್ತ ವಿಭಾಗ	31-12-2018	02-01-2019	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.
17	ಹೊಸಳಯ್ಯ, (ನಿವೃತ್ತ)	ಪ್ರ.ದ.ಸ., ಪಿ.ಆರ್.ಆರ್ ವಿಭಾಗಕ್ಕೆ ಸಂಬಂಧಿಸಿದ ಕೆಲಸಗಳು.	30-09-2015	08-11-2019	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.
18	ಚಿಕ್ಕೇಗೌಡ, (ನಿವೃತ್ತ)	ಕಂದಾಯ ನಿರೀಕ್ಷಕರು, ಕಂದಾಯ ಇಲಾಖೆ, ಪಿ.ಆರ್.ಆರ್ ವಿಭಾಗಕ್ಕೆ ಸಂಬಂಧಿಸಿದ ಕೆಲಸಗಳು.	30-11-2014	08-11-2019	ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.
19	ಕೆ.ಎಸ್.ಶಂಕರ್ (ನಿವೃತ್ತಿ) ಪ್ರ.ದ.ಸ.	ಸಿಬ್ಬಂದಿ ವಿಭಾಗದ ಕೆಲಸ ಕಾರ್ಯಗಳು	31-10-2019	02-11-2019	ಸೇವೆಯನ್ನು ಸಮಾಪ್ತಿಗೊಳಿಸಲಾಗಿದೆ.

22/09/2020.

ಉಪಕಾರ್ಯದರ್ಶಿ-1

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು-20